

ವಲಯದವರು. ಐಟಿ ವಲಯದವರು ಎಂದು ಹಳೆ ಹೊಸ 'ಸಾಟ್ಯಾತೀತರಿರುವ' ಕಾವ್ಯ ಚಿಂತನ ಸಮಾವೇಶದಲ್ಲಿ ಇಂದಿಗೂ 'ಕನ್ನಡನುಡಿ' ಪತ್ರಿಕೆಯ ಟೈಪಿಸ್ಟ್ ರಮಣಿ ಎಂದೇ ಕರೆಯಲ್ಪಡುವ ತನಗೆ ಕವಿತೆ ವಾಚಿಸಲು, ಪ್ರತಿಕ್ರಿಯಿಸಲು ಕರೆ ಬರುವುದೆಂದರೆ..! ದಂಗಾಗಿದ್ದಳು. ಥಟ್ಟನೆ ಅವಳಿಗೆ ಇದರ ಹಿಂದೆ ಏನೋ ಹುನ್ನಾರವಿರಬೇಕೆನಿಸಿ ಯಾರನ್ನೆಲ್ಲ ಕರೆದಿದ್ದೀರಿ ಕೇಳಿದ್ದಳು. ಮಹಿಮಾ ರಮೇಶ್ ಹೆಸರು ಪಟ್ಟಿಯಲ್ಲಿದೆ. ಆಕೆ ಬರಲು ಒಪ್ಪಿಗೆಯನ್ನೂ ಕೊಟ್ಟಿದ್ದಾಳೆಂದು ತಿಳಿದಾಗ ಅಚ್ಚರಿಯಾಗಿತ್ತು. ತನಗೆ ಬಂದ ಆಹ್ವಾನದ ಹಿಂದಿರುವುದು ತಾನಂದು ಕೊಳ್ಳುತ್ತಿರುವ ಕಾರಣವಲ್ಲವೆಂದು ತಿಳಿದಾಗ ಈ ಲೋಹಿತೇಶ್ವರನನ್ನು ಹೀಗೆಯೇ ಎಂದು ಅಳೆಯಲು ಸಾಧ್ಯವಿಲ್ಲ ಅನಿಸಿ ಒಪ್ಪಿಗೆ ಸೂಚಿಸಿದ್ದಳು.

ಒಂದು ಕಾಲದಲ್ಲಿ ಮಹಿಮಾ ರಮೇಶ್ ಹಾಗೂ ಲೋಹಿತೇಶ್ವರ ಅತ್ಯಂತ ಆಪ್ತರಾಗಿದ್ದವರು. ಲೋಹಿತೇಶ್ವರನ ಪತ್ರಿಕೆ ಶುರುವಾದಲ್ಲಿಂದ ಅವಳ ಲೇಖನ ಅಥವಾ ಕವಿತೆ ತಪ್ಪುತ್ತಿರಲಿಲ್ಲ. ಇದು ಯಾವ ಮಟ್ಟಿಗಿತ್ತೆಂದರೆ ಪತ್ರಿಕೆಯಿಂದ ಮಹಿಮಾ ಬೆಳೆಯುತ್ತಿದ್ದಾಳೋ ಮಹಿಮಾಳ ಬರಹ ಪತ್ರಿಕೆಯನ್ನು ಬೆಳೆಸುತ್ತಿದೆಯೋ ಎಂಬ ಚರ್ಚೆಯೇ ಬರಹಗಾರರ ನಡುವೆ ನಡೆಯುವಂತೆ. ಇದ್ದಕ್ಕಿದ್ದಂತೆ ಒಂದು ದಿನ ಲೋಹಿತೇಶ್ವರನ 'ಉಗಮ' ಪತ್ರಿಕೆಯಲ್ಲಿ ಮಹಿಮಾಳ ಬಗ್ಗೆ ತೀರಾ ಕೀಳುಮಟ್ಟದ ಬರಹ ಪ್ರಕಟವಾಯ್ತು. ಅದೇ ದಿನ ಪ್ರತಿಸ್ಪರ್ಧಿಯಂತಿದ್ದ 'ಅದಮ್ಯ' ಪತ್ರಿಕೆಯಲ್ಲಿ ಲೋಹಿತೇಶ್ವರನ ವೈಯಕ್ತಿಕ ತೆವಲುಗಳು, ಆತನ ದೌರ್ಬಲ್ಯ, ಆತ ಯುವ ಬರಹಗಾರರನ್ನು ಪ್ರೋತ್ಸಾಹಿಸುವವನಂತೆ ತನ್ನ ಸುತ್ತ ಸಾಕಿಕೊಂಡ ಬಿಸ್ಕತ್ತು ನಾಯಿಮರಿ ಪಡೆ... ಆ ಪಡೆಗಳ ಮೂಲಕ ಆತ ಯಾವ ಯಾವುದೋ ಕಾರಣಕ್ಕೆ ತನ್ನ ಕಟಾಕ್ಷಕ್ಕೆ ಸಿಗದಿರುವವರ ಬಗ್ಗೆ, ಆಗದವರ ಬಗ್ಗೆ ಬಿಡುಗಡೆ ಮಾಡುವ ವಿಷ, ಗಾಳಿಯಲ್ಲಿ ಹಬ್ಬುವ ಬಗೆಯ ಬಗ್ಗೆ ಊಹಿಸಲೂ ಸಾಧ್ಯವಿಲ್ಲದಂತ ಒಳ ವಿಚಾರಗಳ ಕುರಿತು ಬರೆದ ಮಹಿಮಾ ಕೊನೆಯಲ್ಲಿ ಕನ್ಫೆಷನ್ ಎಂದು ಬರೆದು, ಬರಹದಲ್ಲಿರುವ ವೈಚಾರಿಕತೆ, ಪ್ರಗತಿಪರತೆ, ತೀವ್ರತೆ, ಪ್ರಾಮಾಣಿಕತೆ